# 36

# "ನೀನು ನಂಬುತ್ತೀಯಾ?"

### ಓದುವ ಮನೆಪಾಠ #14

V. ಎರಡನೇ ಪಸ್ಕದಿಂದ ಮೂರನೆಯದಕ್ಕೆ (ಮುಂದುವರೆಯುವದು).

S. ಹುಡುಗಿಯನ್ನು ಬದುಕಿಸಿದ್ದು (ವ್ಯರ್ಥವಾದ ಸ್ವಸ್ಥತೆ) (ಮತ್ತಾಯ 9:18-26; ಮಾರ್ಕ 5:22-43; ಲೂಕ 8:41-56).

T. ಕುರುಡ ಹಾಗೂ ದೆವ್ವ ಹಿಡಿದವನನ್ನು ಗುಣಪಡಿಸಿದ್ದು (ಟೀಕೆಗೆ ಒಳಗಾದದ್ದು) (ಮತ್ತಾಯ 9:27-34).

U. ನಜರೇತನ್ನುಸಂಧಿಸಿದ್ದು (ತಿರಸ್ಕಾರವಾದದ್ದು) (ಮತ್ತಾಯ 13:54-58; ಮಾರ್ಕ 6:1-6; ಲೂಕ 4:16-31).

ಯೇಸು ತಿರಿಗಿ ದೋಣಿಲ್ಲಿ ಈಚೆದಡಕ್ಕೆ ಬಂದಾ ಜನರು ಬಹುದೊಡ್ಡ ಗುಂಪಾಗಿ ಆತನ ಬಳಿಗೆ ಬಂದರು (ಮಾರ್ಕ 5:21; ಲೂಕ 8:40). ಆ ಸಮಯದಲ್ಲಿ ಆತನು ಅನೇಕ ಅದ್ಭುತಗಳ ಸಂಗಡ, ಯಾಯೀರನ ಸತ್ಯ ಮಗಳನ್ನು ಎಬ್ಬಿಸಿದನು. ಈಗ ಆತನು ತನ್ನ ಸ್ವಂತ ಊರಾದ ನಜರೇತಿನಲ್ಲಿ ಕಾರ್ಯಮಾಡುವ ನಿಮಿತ್ತ ಗಲಿಲಾಯದ ಮೂರನೇ ಪ್ರಯಾಣವನ್ನು ಆರಂಭಿಸಿದನು.

"ನಂಬಿಕೆ," ಅಥವಾ "ವಿಶ್ವಾಸ" ಎಂಬುದು ಈ ವ್ಯಾಖ್ಯಾನದ ಪ್ರಮುಖ ಪದವಾಗಿದೆ.[1] "... ಒಬ್ಬ ಸ್ತ್ರೀಯನ್ನು ಕ್ರಿಸ್ತನು ಗುಣಪಡಿಸಿದಾಗ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿತು" (ಮತ್ತಾಯ 9:22) ಎಂದು ಹೇಳಿದ್ದನು. ಮಂದಿರದ ಅಧಿಕಾರಿಗಳಿಗೆ ಆತನು, "ಭಯಪಡಬೇಡಿರಿ ನಂಬಿಕೆ ಮಾತ್ರ ಇರಲಿ" ಎಂದು ಹೇಳಿದನು (ಮಾರ್ಕ 5:36). ಇಬ್ಬರು ಕುರುಡರಿಗೆ, ಅವರು ನಂಬಿದರೆ, ಗುಣವಾಗುವರು ಎಂದು ಆತನು ಹೇಳಿದಾಗ, ಅವರಿಬ್ಬರೂ, "ಹೌದೆಂದರು" "ಆಗ ಆತನು ನೀವು ನಂಬಿದಂತೆ ಆಗಲಿ" ಎಂದನು (ಮತ್ತಾಯ 9:28, 29). ನಜರೇತಿನವರು ಆತನನ್ನು ತಿರಸ್ಕರಿಸಿದಾಗ, "ಅವರ ಅಪನಂಬಿಕೆಯ ಬಗ್ಗೆ" ಆತನು ಆಶ್ಚರ್ಯಪಟ್ಟನು (ಮಾರ್ಕ 6:6).

ಅದ್ಭುತ ಮಾಡುವ ಶಕ್ತಿಯನ್ನು ಹೊಂದಿದ್ದೇವೆ ಎಂದು ಹೇಳುವವರು. ಈ ವಾಕ್ಯದ ಆಧಾರದಿಂದ, ಇವರು ನಂಬದೆ ಹೋದದರಿಂದ, ಯೇಸು ಸಹ ಅದ್ಭುತಗಳನ್ನು ಮಾಡಲೇ ಅಸಾಧ್ಯವಾಯಿತು ಎಂದು ವಾದಿಸುತ್ತಾರೆ ತಮ್ಮಿಂದ ಗುಣ ಹೊಂದದೆ ಹೋದವರಲ್ಲಿ "ಸಾಕಷ್ಟು ನಂಬಿಕೆ ಇರಲಿಲ್ಲವೆಂದು" ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುತ್ತಾರೆ. ಇಲ್ಲಿ "ನಂಬಿಕೆಗೆ" ಒತ್ತು ನೀಡಿದ್ದರೂ, ಯೇಸು, ರೋಗಗಳನ್ನು ಗುಣಪಡಿಸಲು, ಜನರ ನಂಬಿಕೆಯನ್ನು ಆಧಾರ ಮಾಡಿಕೊಂಡಿರುವದಿಲ್ಲ. ನಮ್ಮ ಅಧ್ಯಯನದಲ್ಲಿ ಕಾಣುವ ಅನೇಕ ಅದ್ಭುತಗಳಲ್ಲಿ ನಂಬಿಕೆಯನ್ನು ಅಥವಾ ಅಸಾಧ್ಯ ಎನ್ನುವಂಥ ಸಂಗತಿಯನ್ನು ಒತ್ತಿ ಹೇಳಿರುವದಿಲ್ಲ.[2] ಈಗ ನೋಡುವ ಈ ನಿದರ್ಶನದಲ್ಲಿ ಸತ್ತು ಹೋದವಳು ಬದುಕಿ ಬಂದರು, ಆದರೆ ಅವಳು ಪುನರುತ್ಥಾನ ಹೊಂದುವ ಮೊದಲು, ಅವಳಲ್ಲದ ನಂಬಿಕೆಯ ಕುರಿತಾಗಿ ಏನನ್ನು ದಾಖಲು ಮಾಡಿರುವದಿಲ್ಲ.

ಆದರೆ ಈ ಘಟನೆಗಳು ನಡೆಯುವಾಗ, ಏಕೆ ನಂಬಿಕೆಯ ಬಗ್ಗೆ ತಿಳಿಸಲ್ಪಟ್ಟಿದೆ? ಈ ಯೇಸು ತನ್ನ ಸೇವಾ ಅವಧಿಯ ಉತ್ತುಂಗದಲ್ಲಿದ್ದನು. ಈ ಹಿಂದೆ ಆತನು ಅನೇಕ

ಅದ್ಭುತಗಳನ್ನು ಮಾಡಿದ್ದನು. ನಂಬಿಕೆಯನ್ನು ಹುಟ್ಟಿಸುವ ಒಂದು ಉದ್ದೇಶವು ಅದರಲ್ಲಿ ಅಡಗಿತ್ತು (ಯೋಹಾನ 20:30, 31). ಇನ್ನು ಕೆಲವೇ ತಿಂಗಳುಗಳಲ್ಲಿ ಆತನು ಲೋಕ ವನ್ನು ಬಿಟ್ಟು ಅಗಲುವದರಲ್ಲಿದ್ದನು. ಆ ಸಮಯದಲ್ಲಿ ಆತನು ಭೂಮಂಡಲದಲ್ಲಿ ಬಲವಾದ ವಿಶ್ವಾಸಿಗಳನ್ನು ಈ ಲೋಕದಲ್ಲಿ ಬಿಟ್ಟು ಹೋಗಬೇಕಿತ್ತು. ಆದ್ದರಿಂದ ಹೆಚ್ಚಾದ ಜನರು ನಂಬುವಂತೆ, ಪ್ರೇರಿಸಿದನು.

ಈ ಪಾಠದ ಪ್ರತಿಯೊಂದು ಭಾಗದಲ್ಲೂ ನಂಬಿಕೆ ಮತ್ತು ಅಪನಂಬಿಕೆಯ ನಡುವಿನ ಭಿನ್ನಾಭಿಪ್ರಾಯಗಳನ್ನು ಚರ್ಚಿಸಲಾಗಿದೆ. ಹೌದು, ಅದು ನಮ್ಮ ನಂಬಿಕೆಯನ್ನು ಅವಲಂಭಿಸಿಲ್ಲ ಎಂಬುದು ಪ್ರಮುಖ ಪ್ರಶ್ನೆಯಾಗಿದೆ.

## "ಯಾಯಿರನೇ, ನೀನು ನಂಬುತ್ತೀಯಾ?"

## (ಮತ್ತಾಯ 9:18-26; ಮಾರ್ಕ 5:22-43; ಲೂಕ 8:41-56)

### ನಂಬಿಕೆಯ ಪೋಷಣೆ (ಮತ್ತಾಯ 9:18, 19; ಮಾರ್ಕ 5:22-24; ಲೂಕ 8:41, 42)

ಯಾಯೀರನೆಂಬ ಒಬ್ಬ ಮನುಷ್ಯನು ಯೇಸುವಿನ ಬಳಿಗೆ ಬಂದನು. NASBಯಲ್ಲಿ ಆ ಮನುಷ್ಯನನ್ನು, "ಸಭಾಮಂದಿರದ ಒಬ್ಬ ಅಧಿಕಾರಿ"[3] ಎಂದು ಬಣ್ಣಿಸಲಾಗಿದೆ (ಮಾರ್ಕ 5:22; ನೋಡಿ ಲೂಕ 8:41). KJVಯಲ್ಲಿ, "ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನೆಂದು" ಆ ಸಭೆಯ ಮೇಲ್ವಿಚಾರಕರಲ್ಲಿ ಒಬ್ಬನೆಂದು ಹೇಳಲಾಗಿದೆ (ನೋಡಿ ಲೂಕ 7:3),[4] (ಲೂಕ 13:14). ಓದುವವರಲ್ಲಿ ಒಬ್ಬನು (13:15) ಎಂದಿರುತ್ತದೆ.[5] ಸಭಾಮಂದಿರದ ಅಧಿಕಾರಿಗಳು, ಯೆಹೂದ್ಯ ಸಮಾಜದಲ್ಲಿ ಗೌರವ ಪಾತ್ರರಾಗಿದ್ದರು.

ಯಾಯೀರನು ಕ್ರಿಸ್ತನ ಬಳಿಗೆ ಬಂದಾಗ, "ಆತನ ಪಾದಗಳಿಗೆ ಬಿದ್ದು, ನನ್ನ ಚಿಕ್ಕ ಮಗಳು ಈಗ ಸಾಯುತ್ತಾಳೆ" ಅಂದನು (ಮಾರ್ಕ 5:22; ಮತ್ತಾಯ 9:18; ಮಾರ್ಕ 5:23).[6] ಕೆಪೆರ್ನೌಮಿನ ಅಧಿಕಾರಿಯ ಮಗನನ್ನು ಯೇಸು ಗುಣಪಡಿಸಿದ್ದನು ಎಂಬ ವಿಚಾರವನ್ನು ಯಾಯೀರನು ಅರಿತಿರಬಹುದು (ಯೋಹಾನ 4:46-53). ಯೇಸು ಶತಾಧಿಪತಿಯ ಸೇವಕನನ್ನು ಸಹ ಗುಣಪಡಿಸಿದ್ದನು (ಲೂಕ 7:1-10). ತನ್ನ ಗೌರವವನ್ನು ಬದಿಗಿಟ್ಟು, ಕರ್ತನು ಪಾದಗಳಿಗೆ ಬಿದ್ದು, "ನನ್ನ ಒಬ್ಬಳೇ ಮಗಳನ್ನು ಬದುಕಿಸು" ಎಂದು ಬೇಡಿದನು (ಲೂಕ 8:42). J. W. McGarvey ಯವರ ಪ್ರಕಾರ, "ಅವನ ಉನ್ನತವಾದ ಸ್ಥಾನಕ್ಕಿಂತಲೂ, ಅವನ ಕೊರತೆ ದೊಡ್ಡದಾಗಿತ್ತು. ನಿಮಗೆ ಮಕ್ಕಳಿದ್ದಾರ?"[8] ಹಾಗಿದ್ದರೆ, ಯಾಯೀರನ ಹೃದಯದ ವೇದನೆಯನ್ನು ಅರ್ಥಮಾಡಿಕೊಳ್ಳಿರಿ.

ಅ ಅಧಿಕಾರಿಯ ಮನೆಯ ಕಡಗೆ ಹೋಗಲು ಯೇಸು ಹಿಂಜರಿಯಲಿಲ್ಲ. ಅವರು ನಿಧಾನವಾಗಿ ಹೋದರು. ಲಿವಿಂಗ್ ಬೈಬಲ್ ಪ್ರಕಾರ, "ಜನರ ನಡುವೆ ಹಾದು ಹೋದರು" (ಲೂಕ 8:42; ನೋಡಿ ಮಾರ್ಕ 5:24, 31).

### ನಂಬಿಕೆ ಪರಿಶೋಧಿಸಲ್ಪಟ್ಟಿತು (ಮತ್ತಾಯ 9:20-22; ಮಾರ್ಕ 5:25-36; 8:43-50)

ಯಾಯೀರನ ಮನೆಗೆ ತೆರಳುವಾಗ, ಅಸಮಂಜಸವಾದ ಒಂದು ಘಟನೆಯು ನಡೆಯಿತು. "ಅದ್ಭುತ" ಬಳಿಗೆ ಅಡಗಿರುವ ಮತ್ತೊಂದು ಅದ್ಭುತವು ನಡೆಯಿತು.

ಯೇಸು ಜನರ ಮಧ್ಯದಲ್ಲಿ ಹದು ಹೋಗುವಾಗ, ಬಲಹೀನವಾದ ಒಬ್ಬ ಹೆಂಗಸು ಜನರ ಗುಂಪಿನಲ್ಲಿ ನುಸುಳಿ ಕ್ರಿಸ್ತನ ಬಳಿಗೆ ಬಂದಳು. "ವೈದ್ಯನಾದ ಲೂಕನು ಹನ್ನೆರಡು

ವರ್ಷದಿಂದ ರಕ್ತ ಕುಸುವರೋಗದಿಂದ ಬಳಲುತ್ತಿದ್ದಳು, ಅದು ಗುಣವಾಗದ ರೋಗವಾಗಿತ್ತು ಎಂದಿರುವನು" (ಲೂಕ 8:43) ಮೋಶೆಯ ಧರ್ಮಶಾಸ್ತ್ರದ ಪ್ರಕಾರ, ಅವಳು "ಅಶುದ್ಧಳಾಗಿದ್ದಳು" (ನೋಡಿ ಯಾಜಕಕಾಂಡ 15:19, 26).[9]

ಮಾರ್ಕನ ಸಾರಾಂಶವನ್ನು ಲೂಕನ ಜೊತೆ ಕೆಲಸದವರು ಒಪ್ಪಿಕೊಂಡಿರುವದಿಲ್ಲ. ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ, ಕೈಯಲ್ಲಿದದ್ದನ್ನೆಲ್ಲಾ ಕಳಕೊಂಡರೂ ರೋಗವು ಹೆಚ್ಚುತ್ತಾ ಬಂತು (ಮಾರ್ಕ 5:26). ಅಂದಿನ ದಿನಗಳಲ್ಲಿ ವೈದ್ಯರುಗಳು ಹಸ್ತಗಳಿಂದ ಪ್ರಾಥಮಿಕ ಪರಿಶೀಲನೆಮಾಡಿ,[10] "ಒಂದು ಲೋಟದ ತುಂಬ" ಆರ್ಯವೇದ ಔಷದಿಯನ್ನು ನೀಡಿ, "ದೊಡ್ಡ ಪಾತ್ರೆ ತುಂಬಿ" ರುವಷ್ಟು ಮೂಡನಂಬಿಕೆಯನ್ನು ನೀಡುತ್ತಿದ್ದರು.

ಬಹಳ ದಿವಸಗಳಿಂದ ಅನಾರೋಗ್ಯದಲ್ಲಿರುವವರ ಪರಿಚಯ ನಿಮಗಿದ್ದರೆ, ಈ ಹೆಂಗಸಿನ ಬಾಧೆಯನ್ನು ನೀವು ಅರ್ಥಮಾಡಿಕೊಳ್ಳಬಹುದು. ಪ್ರಾಯಶ ಬಲಹೀನಳಾಗಿ, ಹೆಚ್ಚಿನ ನೋವಿನಿಂದ ತುಂಬಿರಬಹುದು. ಹಾಗೂ ಯೇಸು ಆ ಮಾರ್ಗದಲ್ಲಿ ಬರುತ್ತಿದ್ದಾನೆ ಎಂಬ ಮಾಹಿತಿಯನ್ನು ಪಡೆದು ಬಲಹೊಂದಿದವಳಾಗಿ ಆತನ ಬಳಿಗೆ ಹೋದಳು ಆತನನ್ನು ಮುಟ್ಟುವಷ್ಟು ಮಟ್ಟಿಗೆ ಆಕೆ ಜನರ ಗುಂಪಿನ ನಡುವಿನಿಂದು ನುಸುಳಿಹೋದಳು.

"ನಾನು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು" ಎಂದು ಯೋಚಿಸಿದನು (ಮತ್ತಾಯ 9:21; ನೋಡಿ ಮಾರ್ಕ 5:28). ಯಾವುದೇ ವ್ಯಕ್ತಿ ಸಾಕ್ಷಿಯನ್ನು ಬಯಸಿ, ಸೌಕ್ಯನೀಡುವನು ಎಂದು ನಂಬಿ ಯಾವ ವ್ಯಕ್ತಿಯ ಬಳಿಕೆ ಬರುತ್ತಾರೋ, ಆ ವ್ಯಕ್ತಿಯಲ್ಲಿ ಅದ್ಭುತ ಶಕ್ತಿ ಇದೆ ಎಂಬುದು ವಾಡಿಕೆಯಾಗಿದೆ (ನೋಡಿ ಮತ್ತಾಯ 14:36; ಅಪೊಸ್ತಲರ ಕೃತ್ಯಗಳು 19:11, 12). ಆಕೆಯು ಯೇಸುವಿಗೆ ತೊಂದರೆ ಕೊಡಬಾರದೆಂದು ತಿಳಿದು, ಆತನ ಉಡುಪನ್ನು ಮುಟ್ಟುವ ನಿರ್ಧಾರ ಮಾಡಿದ್ದಳು. ಹಾಗಿದ್ದರೂ ಸರಿಯೇ ಆಕೆಯ ನಂಬಿಕೆಯು ಕ್ರಿಸ್ತನ ಶಕ್ತಿಯನ್ನು ಅವಲಂಭಿಸಿತ್ತು.

ಆಕೆ ಹಿಂದಿನಿಂದ ಬಂದು "ಆತನ ಉಡುಪನ ಗೊಂಡೆಯನ್ನು ಮುಟ್ಟಿದಳು" (ಮತ್ತಾಯ 9:20).[11] "ಮುಟ್ಟಿದ ಕೂಡಲೇ ಆಕೆಗೆ ರಕ್ತ ಹರಿಯುವದು ನಿಂತು ಹೋದದರಿಂದ - ಆಕೆಯು - ನನ್ನನ್ನು ಕಾಡಿದ ರೋಗವು ಹೋಗಿ ನನಗೆ ಗುಣವಾಯಿತು ಅಂದುಕೊಂಡಳು" (ಮಾರ್ಕ 5:29). ನಾವಿರುವ ಸ್ಥಳದಲ್ಲಿ ನಮಗೆ ರೋಗವಿರುವಾಗ, "ನನಗೆ ಕೆಟ್ಟದೆನಿಸುತ್ತದೆ" ಸ್ವಸ್ಥವಾ ದಾಗ, "ನನಗೆ ಒಳ್ಳೆಯದಾಯಿತು" ಎನ್ನುತ್ತೇವೆ. ಆಕೆಯು "ಕೆಟ್ಟ ಪರಿಸ್ಥಿತಿಯಿಂದ" ನೇರವಾಗಿ "ಒಳ್ಳೆಯದಕ್ಕೆ ಹೋದಳು"! ಆಕೆಯ ದೇಹವು ನೆಟ್ಟಗಾಗಿ, ಆಕೆಯ ಮುಖದ ಮೇಲೆ ಬಣ್ಣ ಬದಲಾಯಿತು, ಆಕೆ ನಗುಮುಖದವಳಾದಳು.

ಆ ಕ್ಷಣವೇ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತಿಳುಕೊಂಡನು (ಮಾರ್ಕ 5:30ಎ; ಲೂಕ 8:46). ನಾನು ಅಲ್ಪಜ್ಞಾನಿಯಾಗಿರುವದರಿಂದ, ಈ ಧೈವೀಕ ಶಕ್ತಿಯ ಬಗ್ಗೆ ಅರ್ಥಮಾಡಿಕೊ ಳ್ಳ ಲಾರೆನು, ಆದರೆ ಅದರ ವಿವರಣೆಯು ನನಗೆ ಆಶ್ಚರ್ಯ ಮೂಡಿಸುತ್ತದೆ. ಆ ವಾಕ್ಯಗಳನ್ನು ಧ್ಯಾನಿಸುವಾಗ, ಅದ್ಭುತವು ಕ್ರಿಸ್ತನಿಂದ ಬೆಲೆಯನ್ನು ಹೊಂದಿತು ಎಂದು ತಿಳಿಯುತ್ತೇನೆ. ಪ್ರತಿ ಅದ್ಭುತದ ಸಮಯದಲ್ಲಿಯೂ, ಯೇಸುವಿನಿಂದ ಶಕ್ತಿಯು ಹೊರಟು ಹೋಗುತ್ತಿತ್ತು.[12] ಅದಾಗ್ಯೂ ಆತನು ಜನರನ್ನು ಸ್ಪರ್ಷಿಸುತ್ತಿದ್ದನು.

ಯೇಸುವಿನಿಂದ ಆ ಶಕ್ತಿಯು ಹೊರಟು ಹೋದ ನಂತರ, ಆತನು ನಿಂತು, "ನನ್ನ ಉಡುಪನ್ನು ಯಾರು ಮುಟ್ಟಿದರು" ಅಂದನು (ಮಾರ್ಕ 5:30ಬಿ). ಶಿಷ್ಯರಿಗೆ, ಈ ಮಾತಿನಿಂದ ಆಶ್ಚರ್ಯವಂಟಾಯಿತು. "ಆತನ ಶಿಷ್ಯನು ಜನರು ನಿನ್ನನ್ನು ನೂಕುವದನ್ನು ಕಂಡು ನನ್ನನ್ನು ಯಾರು ಮುಟ್ಟಿದರೆಂದು ಕೇಳುತ್ತಿಯಾ?" ಎಂದು ಹೇಳಿದರು (ಮಾರ್ಕ 5:31). ನಮಗೂ ಸಹ ಇದು ಗೊಂದಲದ ಮಾತಾಗಿದೆ. ಅಂದರೆ ತನ್ನನ್ನು ಮುಟ್ಟಿದವರ ಬಗ್ಗೆ, ಯೇಸು ಅರಿತವನಾಗಿದ್ದನು. ಆಕೆ ಏನು ಮಾಡಿದಳು. ಏಕೆ ಮಾಡಿದಳು ಎಂಬುದನ್ನು ಅರಿತಿದ್ದನು.

ಅದರೆ ಆತನು ಆಕೆಯ ಕಡೆಗೆ ತಿರುಗಿದನು (ಮತ್ತಾಯ 9:22; ಮಾರ್ಕ 5:32).

ಯೇಸು ಯಾವಾಗಲೂ ತನ್ನ ಮಾಹತಿಗಾಗಿ ಪ್ರಶ್ನೆಗಳನ್ನು ಕೇಳದೆ, ಇತರರಿಗೆ ಸತ್ಯವನ್ನು ಪ್ರಕಟಿಸುವದಕ್ಕಾಗಿ ಪ್ರಶ್ನಿಸುತ್ತಿದ್ದನು.[13] ಈ ಪರಿಸ್ಥಿತಿಯಲ್ಲಿ ಇದೇ ಘಟನೆ ನಡೆದಿತ್ತು. ಪ್ರಾಯಶಃ ತನ್ನ ಸುತ್ತಲಿರುವವರು ಆ ಹೆಂಗಸಿನ ನಂಬಿಕೆಯನ್ನು ಅದರಿಂದಾದ ಆಶೀರ್ವಾದವನ್ನು ಅರಿಯ ಬಯಸಿರಬಹುದು. ಲೂಕನು ಬರೆದು,

> ಆ ಹೆಂಗಸು ತಾನು ಮರೆಯಾಗಿಲ್ಲವೆಂತ ತಿಳಿದು ನಡುಗುತ್ತಾ ಬಂದು ಆತನಿಗೆ ಅಡ್ಡಬಿದ್ದು[14] ತಾನು ಇಂಥ ಕಾರಣದಿಂದ ಈತನನ್ನು ಮುಟ್ಟಿದೆನೆಂತಲೂ ಮುಟ್ಟಿದ ಕೂಡಲೆ ತನಗೆ ವಾಸಿಯಾಯಿತೆಂತಲೂ ಎಲ್ಲಾ ಜನರ ಮುಂದೆ ತಿಳಿಸಿದಳು. ಆತನು ಆಕೆಗೆ - ಮಗಳೇ ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು ಎಂದು ಹೇಳಿದನು (ಲೂಕ 8:47, 48).

"ಸಮಾಧಾನದಿಂದ ಹೋಗು" ಎಂಬ ಅಂತ್ಯೋಕ್ತಿ, ಆಕೆ ಪುನ ರೋಗವನ್ನು ಹೊಂದಲಿಲ್ಲ ಎಂಬ ಸೂಚನೆಯನ್ನು ನೀಡುತ್ತದೆ.

ಹೊರಟು ಹೋಗುತ್ತಿದ್ದ ಆ ಹೆಂಗಸಿನ ಚಿತ್ರಣವನ್ನು ನೋಡಿರಿ - ನಂತರ ನಿಮ್ಮ ದೃಷ್ಟಿಯನ್ನು ಯಾಯೀರನ ಕಡೆಗೆ ತಿರುಗಿಸಿರಿ. ಮರಣದ ಬಾಗಿಲಿನಲ್ಲಿದ್ದ ತನ್ನ ಮಗಳ ಬಳಿಗೆ ಯಾಯೀರನು ಯೇಸುವನ್ನು ಬೇಗನೆ ಕರಕೊಂಡು ಹೋಗುತ್ತಿದ್ದನು. ಅವನು ಜನರ ಮಧ್ಯದಲ್ಲಿ ಹಾದುಹೋಗುವಾಗ, "ದೇವರೇ ನಾವು ತಡವಾಗದಂತೆ" ಸಹಾಯಿಸು ಎಂದು ಅನೇಕ ಬಾರಿ ಪ್ರಾರ್ಥಿಸಿರಬಹುದು ನನ್ನ ಮಗಳು ಸಾಯುವದರೊಳಗಾಗಿ ತಲುಪುವಂತೆ ಮಾಡು. ಆದರೆ ಈಗ ಯೇಸು, ಯಾವುದೇ ಬೆಲೆ ಇಲ್ಲದ ಹೆಂಗಸಿಗೆ ಮಾಡಿದ ಕಾರ್ಯವನ್ನು ತಾಳ್ಮೆಯಿಂದ ನಿಂತು ನೋಡಬೇಕಾಯಿತು. ನಾನು ಯಾಯೀರನಾಗಿದ್ದರೆ, "ದೇವರೇ ಆಕೆ ಹನ್ನೆರಡು ವರುಷದಿಂದ ಈ ಸ್ಥಿತಿಯಲ್ಲಿದ್ದಾಳೆ. ಅವಳಿಗೆ ನಂತರದಲ್ಲಿ ಸಹಾಯಿಸು ಎಂದು ಹೇಳುತ್ತಿದೆ. ಇನ್ನೆರಡು ದಿನ ಕಾಯಬಹುದು. ಆದರೆ ನನ್ನ ಮಗಳು *ಈಗ* ಸಾಯುತ್ತಿದ್ದಾಳೆ!"

ಒಂದು ವೇಳೆ ಆ ಅಧಿಕಾರಿ ತಡವಾದದ್ದಕ್ಕೆ ಬೇಸರಗೊಂಡಿದ್ದರೆ, ಇನ್ನು ಅಧಿಕ ಬೇಸರ ಗೊಳ್ಳುವ ಸಂದೇಶವು ಅವನಿಗೆ ಬಂತು: "ಸಭಾ ಮಂದಿರದ ಅಧಿಕಾರಿಯ ಒಬ್ಬ ಆಳು ಬಂದು - ನಿನ್ನ ಮಗಳು ಸತ್ತಳು ಗುರುವಿಗೆ ತೊಂದರೆ ಕೊಡಬೇಡ!" ಅಂದನು (ಲೂಕ 8:49ಬಿ). ಈಗ ಆ ತಂದೆಯ ಹೃದಯವು ಸತ್ತು ಹೋಗಿರಬಹುದಲ್ಲವೇ. ನಿಮ್ಮಲ್ಲಿ ಕೆಲವರು ಇದನ್ನು ಅರ್ಥಮಾಡಲು ಸಾಧ್ಯವಿದೆ.

ಯಾಯೀರನ ನಿರಾಶೆಯ ಬಗ್ಗೆ ಕ್ರಿಸ್ತನು ಅರಿತಿರುವನು. "ಅಂಜಬೇಡ, ನಂಬಿಕೆ ಮಾತ್ರ ಇರಲಿ ಆಕೆ ಬದುಕುವಳು ಎಂದು ಮೃದುವಾದ ಮಾತಿನಲ್ಲಿ ಕ್ರಿಸ್ತನು ಹೇಳಿದನು"[15] (ಲೂಕ 8:50; ಮಾರ್ಕ 5:36 ನೋಡಿ). ಎಂಥಹ ನಂಬಿಕೆಯ ಪರೀಕ್ಷೆ!

## ನಂಬಿಕೆಯ ಪ್ರತಿಫಲ (ಮತ್ತಾಯ 9:23-26; ಮಾರ್ಕ 5:37-43; ಲೂಕ 8:51-56)

ಯೇಸು ಯಾಯೀರನ ಮನೆಗೆ ಹೊರಟನು. ಅವರು ಮನೆಸೇರಿದ ಹೊತ್ತಿಗಾಗಲೇ, ಆ ಮಗಳು ಸತ್ತು, ಅಂತ್ಯಕ್ರಿಯೆಯ ಕಾರ್ಯಗಳು ಸಿದ್ಧಗೊಂಡಿದ್ದವು. ಆ ಕಾಲದಲ್ಲಿ ಮರಣವಾದ ದಿವಸವೇ ಸಮಾಧಿ ಮಾಡುವ ಸಂಪ್ರದಾಯವಿತ್ತು. ಅಳುವದಕ್ಕಾಗಿ ಜನರನ್ನು ಬಾಡಿಗೆ ಪಡೆದು ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದ, ಅಳುವ[16] ಧ್ವನಿಯು ಹೆಚ್ಚಾಗಿದ್ದರೆ, ಆ ಮನೆಯ ಯಜಮಾನನ ಶ್ರೀಮಂತಿಕೆ ಎಷ್ಟಿತ್ತೆಂದು ತಿಳಿಯಬಹುದಿತ್ತು. "ಕ್ರಿಸ್ತನು ಆ ಮನೆಯನ್ನು ಪ್ರವೇಶಿಸಿದಾಗ, ಅಲ್ಲಿ ಬಹು ಗದ್ದಲವನ್ನು ಕಂಡನು" (ಮಾರ್ಕ 5:38; ಮತ್ತಾಯ 9:23). ಅಲ್ಲಿ "ಕೊಳಲು ವಾದ್ಯಗಾರರೂ" ಇದ್ದರು. "ಜನರು ಹಾಗೂ ವಾದ್ಯಗಾರರೂ ಗೋಳಾಡುತ್ತಿದ್ದರು" (ಮತ್ತಾಯ

9:23; ಮಾರ್ಕ 5:38).

ಅಂದು ಯಾಯೀರನು ಅಹದ್ದೆಲವನ್ನು ಹತೋಟಿಗೆ ತಂದು, ಜನರು ಯೇಸುವಿನ ಮಾತನ್ನು ಆಲಿಸಲು ಅವಕಾಶ ಮಾಡಿಕೊಡುವದು ಅವನಿಗೆ ಪ್ರಯಾಸವಾಯಿತು. ಅವರು ಗದ್ದಲ ಮಾಡಬಾರದೆಂಬ ಸೂಚನೆಯನ್ನು ನೀಡಿದ ನಂತರ, "ಹೊರಗೆ ಹೋಗಿರಿ, ಹುಡುಗಿ ಸತ್ತಿಲ್ಲ ನಿದ್ದೆ ಮಾಡುತ್ತಾಳೆ"[17] ಅಂದನು (ಲೂಕ 8:52; ಮತ್ತಾಯ 9:24; ಮಾರ್ಕ 5:39). "ಆದರೆ ಆ ಜನರು ಹಾಸ್ಯಮಾಡಿದರು"[18] (ಮತ್ತಾಯ 9:24; ಮಾರ್ಕ 5:40). ಲೂಕನು ಇದರ ಕುರಿತಾಗಿ, "ಜನರು ಆಕೆ ಸತ್ತಳೆಂದು ತಿಳಿದುಕೊಂಡದ್ದರಿಂದ ಹಾಸ್ಯ ಮಾಡಿದರು" (8:53). ಪರಿಣಿತನಾಗಿ ಆಳುವವನು, "ಈ ವರ್ಷದಲ್ಲಿ ಸುಮಾರು ಐವತ್ತು ಶವಗಳನ್ನು ನೋಡಿದ್ದೇನೆ, ವ್ಯಕ್ತಿಯನ್ನು ನೋಡುವಾಗಲೇ ಅವರು ಸತ್ತಿರುವನು ಎಂದು ತಿಳಿಯುತ್ತೇನೆ ಎಂದು ಹೇಳಿರಬಹುದು!"

ಆಳುವವರಿಗೂ, ಗದ್ದಲ ಮಾಡುವವರಿಗೆ ಬಾಗಿಲ ದಾರಿಯನ್ನು ತೋರಿಸಿದ ನಂತರ (ಮಾರ್ಕ 5:40ಎ), ಕ್ರಿಸ್ತನು ಯಾಯೀರನನ್ನು ಅವನ ಹೆಂಡತಿಯನ್ನು ಹಾಗೂ - ಪೇತ್ರ ಯಾಕೋಬ, ಯೋಹಾನ ಎಂಬ ಮೂವರು ಶಿಷ್ಯರನ್ನು, ಆ ಮಗಳ ಶವವಿದ್ದ ಒಳಕೋಣೆಗೆ ಕರೆದೊಯ್ದನು (ಮಾರ್ಕ 5:37) - ಪೇತ್ರ, ಯೋಹಾನ, ಹಾಗೂ ಯಾಕೋಬ ಈ ಮೂವರು ಶಿಷ್ಯರು, ಯೇಸುವಿನ ಅಪೊಸ್ತಲರಲ್ಲಿ ಪ್ರಮುಖರಾಗಿದ್ದರು. ಇದೇ ಮೊದಲ ಬಾರಿಗೆ ಯೇಸು ಅವರನ್ನು ಈ ರೀತಿಯಾಗಿ ಪ್ರತ್ಯೇಕವಾಗಿ ಕರೆದೊಯ್ದಿದ್ದನು.[19]

ಈ ಘಟನೆಯನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ: ಯೇಸು ಆ ಹುಡುಗಿಯ ಜೀವವಿಲ್ಲದ ದೇಹದ ಬಳಿಗೆ ಹೋಗಿ, ತಣ್ಣಗಾಗಿದ್ದ ಆಕೆಯ ಕೈಗಳನ್ನು ಹಿಡಿದು, ಮೆದುಧ್ವನಿಯಲ್ಲಿ ಮಾತನಾಡಿ "ತಲಿಥಾ ಕೂಮ್" ಅಂದನು! ಆ ಮಾತಿಗೆ ಅಮ್ಮಣಿ ಏಳೆ ನ್ನುತ್ತೇನೆ ಎಂಥರ್ಥ (ಮಾರ್ಕ 5:41). ಮಲಗಿರುವ ಮಗುವನ್ನು ಮುಂಜಾನೆ ಎಬ್ಬಿಸುವಂಥ ನಯವಾದ ಮಾತುಗಳಾಗಿದ್ದವು.[20]

ಕೂಡಲೇ ಆ ಹುಡುಗಿ "ಎದ್ದು ನಡೆದಾಡಿದಳು" (ಲೂಕ 8:55).[21] ಆಕೆಯು ಕಣ್ಣುಗಳನ್ನು ಬಿಟ್ಟಳಲ್ಲವೇ? ಆಕೆಯ ತಂದೆ ತಾಯಿಗಳ ಮಾತನ್ನು ಆಲಿಸಿದ್ದಿರಾ? ಮಾರ್ಕ 5:42ರಲ್ಲಿ "ಆಕೆ ಎದ್ದು ನಡೆದಾಡಿದಳು."[22] ಆಕೆ ತನ್ನ ತಂದೆತಾಯಿಗಳ ಬಳಿಗೆ ಓಡಿದಳಲ್ಲವೇ? ಯೇಸು ನಗುತ್ತಾ ಆ ತಾಯಿಗೆ, ಮಗಳಿಗಾಗಿ ಆಹಾರ ಸಿದ್ಧಮಾಡು ಎಂದು ಹೇಳಿರಬಹದಲ್ಲವೇ (ಮಾರ್ಕ 5:43; ಲೂಕ 8:55)?[23]

ಫರಿಸಾಯರ ಕುಯುಕ್ತಿಯ ನಿಮಿತ್ತ ಈ ಸಂಗತಿಯನ್ನು ಯಾರಿಗೂ ಹೇಳಿರ ಬಾರದೆಂದು ಯೇಸು ಹೇಳಿದನು. "ಆ ಮೇಲೆ ಆತನು ಅವರಿಗೆ ಇದು ಯಾರಿಗೂ ತಿಳಿಯಬಾರದೆಂದು ಹೇಳಿದನು" (ಮಾರ್ಕ 5:43; ನೋಡಿ ಲೂಕ 8:56). "ಆದರೆ ಈ ಸುದ್ದಿ ಆ ದೇಶದೊಳಗೆಲ್ಲಾ ಹಬ್ಬಿತು" (ಮತ್ತಾಯ 9:26).

ತಂದೆಯು ಈ ಘಟನೆಯನ್ನು ನೋಡುತ್ತಿರುವಾಗ, ಆ ತಾಯಿಯು ತನ್ನ ಮಗಳಿಗೆ ಆಹಾರ ನೀಡಲು ತವಕಿಸುತ್ತಿರುವದನ್ನು ನಾನು ಊಹಿಸಿಕೊಳ್ಳುತ್ತೇನೆ. ಯಾಯೀರನೊಂದಿಗೆ ನೀವು ಮಾಡುವದಾದರೆ, ಯಾಯೀರನೇ ನೀನು ನಂಬುತ್ತೀಯಾ? ಎಂದು ಪ್ರಶ್ನಿಸುವದಾದರೆ, ಅವನು "ಹೌದು!" ಎನ್ನುವನ್ನಲ್ಲವೇ.

## "ಕುರಡರೇ, ನೀವುಗಳು ನಂಬುತ್ತೀರಾ?" (ಮತ್ತಾಯ 9:27-34)

### ಧೈರ್ಯಕವಾಗಿ ಕುರಡರಾಗಿದ್ದರವ ನಂಬಿಕೆ (ವಚನಗಳು 27-31)

ಮತ್ತಾಯನ ಪ್ರಕಾರ, ಯೇಸು ಯಾಯೀರನ ಮನೆಯನ್ನು ಬಿಟ್ಟು ಹೋಗುವಾಗ ಇಬ್ಬರು ಕುರುಡರು - ದಾವೀದನ ಕುಮಾರನೇ, "ನಮ್ಮನ್ನು ಕರುಣಿಸು!"[24] ಅಂದರು (ವಚನ 27).

ಆತನು ಇದ್ದ ಮನೆಗೆ ಕುರುಡರು ಹೋದರು (ವಚನ 28ಎ). ಯೇಸು ಅವರಿಗೆ ನಾನು ಇದನ್ನು ಮಾಡಬಲ್ಲೆನೆಂಬದನ್ನು ನಂಬುತ್ತೀರೋ ಎಂದು ಕೇಳಿದಕ್ಕೆ ಅವರು - ಹೌದು ಸ್ವಾಮಿ ಎಂದರು. "ಆಗ ಆತನು ಅವ ಕಣ್ಣುಗಳನ್ನು,[25] ಮುಟ್ಟಿ - ನೀವು ನಂಬಿದಂತೆ ಆಗಲಿ ಅಂದನು. ಆಗ ಅವರಿಗೆ ಕಣ್ಣು ಬಂದವು" (ಮತ್ತಾಯ 9:28ಬಿ-30ಎ). ಇದು ಯಾರಿಗೂ ತಿಳಿಯಬಾರದು ಎಂದು ಯೇಸು ಮೊತ್ತೊಂದು ಬಾರಿ ಹೇಳಿದನು (ವಚನ 30ಬಿ). ಆದರೂ ಈ ಸುದ್ದಿಯು ಆ ದೇಶದಲ್ಲೆಲ್ಲಾ ಹಬ್ಬಿತು (ವಚನ 31).

### ಆತ್ಮೀಕ ಕುರಡರ ಅಪನಂಬಿಕೆ (ವಚನಗಳು 32-34)

ಯೇಸು ಆ ಮನೆಯಿಂದ ಹೊರ ಬಂದಾಗ, ಅನೇಕ ಜನರು ಆತನನ್ನು ಸುತ್ತುವರೆದರು, ಆತನು ಅಲ್ಲಿ ಬೋಧಿಸುವ ಹಾಗೂ ಸ್ವಸ್ಥಮಾಡುವ ಸೇವೆಯನ್ನು ಮುಂದುವರೆಸಿದನು. ಆಗ ದೆವ್ವ ಹಿಡಿದ ಮೂಕನನ್ನು[26] ಆತನ ಬಳಿಗೆ ಕರೆ ತಂದರು (ವಚನ 32). ಯೇಸು ದೆವ್ವವನ್ನು ಬಿಡಿಸಿದ ನಂತರ, ಮೂಕನು ಮಾತಾಡುವವನಾದನು. ಆಗ ಜನರು ಬೆರಗಾಗಿ, "ಇಸ್ರಾಯೇಲ್ ಜನರಲ್ಲಿ ಇಂಥ ಕಾರ್ಯವನ್ನು ಇಡುವರಿಗೂ ಯಾರು ನೋಡಲಿಲ್ಲ ಎಂದರು" (ವಚನ 33).

ಸಹಜವಾಗಿ, ಅಲ್ಲಿಯೂ ಆತನ ಟೀಕಾಕಾರರು ಇದ್ದರು. ಅವರು ಆತನನ್ನು ದೂಷಿಸಿ: ಇವನು ದೆವ್ವಗಳ ಒಡೆಯನ ಸಹಾಯದಿಂದೇ ದೆವ್ವಗಳನ್ನು ಬಿಡಿಸುತ್ತಾನೆ ಅಂದರು (ವಚನ 34).[27] ಅಹಂಕಾರವು ಅವರ ಹೃದಯಗಳನ್ನು ಕುರುಡಾಗಿಯೂ ಕಿವುಡರನ್ನಾಗಿಯೂ ಮಾಡಿದ್ದವು (ನೋಡಿ ಮತ್ತಾಯ 13:15). ಕ್ರಿಸ್ತನು ಏನೇ ಮಾಡಿದ್ದರೂ, ಅದನ್ನು ತಿರಸ್ಕರಿಸಿದರು.

## "ನಜರೇತಿನ ಜನರೇ, ನೀವು ನಂಬುತ್ತೀರಾ?"

## (ಮತ್ತಾಯ 13:54-58; ಮಾರ್ಕ 6:1-6; ಲೂಕ 4:16-30)

ಯೇಸು ಯಾಯೀರನ ಮಕ್ಕಳನ್ನು ಸ್ವಸ್ಥ ಮಾಡಿದ ತಕ್ಷಣ (ಮಾರ್ಕ 5:37-43), ತನ್ನ ಊರಾದ ನಜರೇತಿಗೆ ಹೋದನು (ಮಾರ್ಕ 6:1). ಪ್ರಾಯಶಃ ಇದು ಆತನ ಗಲಿಲಾಯದ ಮೂರನೇ ಪ್ರಯಾಣದ ಮೊದಲ ಭೇಟಿ ಇರಬಹುದು[28] (ಮಾರ್ಕ 6:6; ನೋಡಿ ಮತ್ತಾಯ 9:35).

ನಜರೇತಿನವರು ಯೇಸುವನ್ನು ತಿರಸ್ಕರಿಸಿದ ವಿಚಾರವನ್ನು ಲೂಕನು ಈ ಹಿಂದೆ ತಿಳಿಸಿರುವನು, ಗಲಿಲಾಯದ ಸೇವೆಯಲ್ಲಿ ನಜರೇತಿನಿ ಬದಲಾಗಿ, ಯೇಸು ಕಪೆರ್ನೌಮನ್ನು ಆಯ್ಕೆ ಮಾಡಿದನು (ನೋಡಿ ಲೂಕ 4:16-31). ಅಂದರೆ ಅನೇಕ ಬರಹಗಾರರ ಪ್ರಕಾರ, ನಜರೇತಿನಲ್ಲಿ ಯೇಸು ಎರಡುಬಾರಿ ತಿರಸ್ಕರಿಸಲ್ಪಟ್ಟಿದ್ದನು: ಗಲಿಲಾಯದ ಆರಂಭ ಹಾಗೂ ಅಂತ್ಯದ ಸೇವೆಯಲ್ಲಿ ಈ ಘಟನೆ ನಡೆದಿರಬಹುದು. ಒಂದು ವೇಳೆ ಈ ರೀತಿಯಾಗಿದ್ದರೆ[29] ಮತ್ತಾಯ ಮತ್ತು ಮಾರ್ಕರು ಸಹ ಇದಕ್ಕೆ ಕೈ ಜೋಡಿಸಿರುವರು: ಪ್ರತಿ ಬೇಟಿಯಲ್ಲಿಯೂ ಯೇಸು ಸಭಾಮಂದಿರಕ್ಕೆ ಹೋಗಿ ಉಪದೇಶಿಸುತ್ತಿದ್ದನು (ಮತ್ತಾಯ 13:54; ಮಾರ್ಕ 6:2; ಲೂಕ 4:16-21). ಪ್ರತಿಸಲವು ಜನರು ಆತನ ಬೋಧನೆಗೆ ಆಕರ್ಷಿತರಾಗಿದ್ದರು (ಮತ್ತಾಯ 13:54; ಮಾರ್ಕ 6:2; ಲೂಕ 4:22) ಆದರೆ ಆತನು ನಜರೇತಿನವನೇ ಆಗಿದ್ದರಿಂದ, ತಿರಸ್ಕಾರಮಾಡಿದರು (ಮತ್ತಾಯ 13:55-57; ಮಾರ್ಕ 6:3, 4; ಲೂಕ 4:22). ಮತ್ತಾಯ ಮಾರ್ಕರು ಪೂರ್ಣ ಮಾಹಿತಿ ನೀಡಿದ್ದರೆ, ಲೂಕನು ನೀಡಿರುವದಿಲ್ಲ, ಆದರೆ ಮಾರ್ಕ ಮತ್ತು ಮತ್ತಾಯನಲ್ಲಿ ತಿಳಿಸದ ಮಾಹಿತಿಯನ್ನು ಲೂಕನು ತಿಳಿಸಿರುವನು; ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿರುವದಿಲ್ಲ - ಹೆಚ್ಚಿನ ಮಾಹಿತಿಯಷ್ಟೆ. ಹೇಗೂ ಇವರೆಲ್ಲರೂ ನೀಡಿರುವ

ಮಾಹಿತಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ಮುಂದಿನ ಪ್ರಸಂಗದಲ್ಲಿ ಇದನ್ನು ವಿವರಿಸಲಾಗಿದೆ, ಆದರೆ ನಂಬಿಕೆಗೆ ಸಂಬಂಧಪಟ್ಟ ಟಿಪ್ಪಣಿಗಳನ್ನು ಇಲ್ಲಿ ನೀಡಲಾಗಿದೆ.

**ಸಾಧ್ಯವಾದ ನಂಬಿಕೆ (ಮತ್ತಾಯ 13:54; ಮಾರ್ಕ 6:1, 2; ಲೂಕ 4:16-22)**

ತಾನು ಬೆಳೆದ ಪ್ರದೇಶವಾ ನಜರೇತಿಗೆ ಯೇಸು ಹಿಂದಿರುಗಿ, ಅಲ್ಲಿನ ಸಭಾ ಮಂದಿರದ ಆರಾಧನೆಗೆ ಹೋದನು.[30] ಅಲ್ಲಿನ ಆರಾಧನೆಯಲ್ಲಿ ಪಾಲು ತೆಗೆದು ಕೊಳ್ಳುವ ಅವಕಾಶದ ಸಮಯದಲ್ಲಿ, ಬರಲಿದ್ದ ಮೆಸ್ಸಿಯನ ಕುರಿತಾದ ಪ್ರವಾದನೆಯ ವಾಕ್ಯವನ್ನು ಯೆಶಾಯ 61ನೇ ಅಧ್ಯಾಯದಿಂದ ಓದಿ, ''ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ ಎಂದು ಹೇಳಿ'' (ಲೂಕ 4:21). ಪ್ರವಾದಿಗಳು ಯಾರ ಕುರಿತು ಪ್ರವಾದಿಸಿದರೂ, ಆ ವ್ಯಕ್ತಿ ಯೇಸುವೇ ಎಂದು ನಿರೂಪಿಸಿದನು.

**ನಿರಾಕರಿಸಲ್ಪಟ್ಟ ನಂಬಿಕೆ (ಮತ್ತಾಯ 13:54-58ಣಿ ಮಾರ್ಕ 6:2-6ಣಿ ಲೂಕ 4:22-30)**

ಅಲ್ಲಿ ಮಿಶ್ರ ಪ್ರತಿಕ್ರಿಯೆ ಆಗಿತ್ತು. ''ತಮ್ಮ ಊರಿನವನ್ನೊಬ್ಬನು'' ದೊಡ್ಡ ಕಾರ್ಯವನ್ನು ಮಾಡಿದನು ಎಂಬದಾಗಿ ಜನರು ಹೆಮ್ಮೆ ಪಟ್ಟರೂ, ಆತನ ಮಾತುಗಳಿಂದ ಅವರು ಕೆರಳಿದವರಾದರು. ಅವರ ಮನಸ್ಸಿನ ಆಲೋಚನೆಗಳನ್ನು ಗ್ರಹಿಸಬಹುದಾಗಿದೆ. ಆತನು ಮಗುವಾಗಿದ್ದಾಗ ನನ್ನ ಮಗನ ಸಂಗಡ ಆಟವಾಡಿದನು! ಈಗ ತನ್ನ ಬಗ್ಗೆ ಆತನು ಏನು ತಿಳಿದಿದ್ದಾನೆ? NASB ಪ್ರಕಾರ, ''ಆತನನ್ನು ತಪಿತಸ್ಥನೆಂದು ಅವರು ಭಾವಿಸಿದರು'' (ಮತ್ತಾಯ 13:57). ದಿ ನ್ಯೂ ಸೆಂಚುರಿ ಬೈಬಲ್ ಪ್ರಕಾರ,[31] ಜನರು ಆತನ ಬಗ್ಗೆ ಕೋಪಗೊಂಡರು.

ಹದಿನಾರು ಮೈಲುಗಳ ದೂರವಿದ್ದ ಕಪೆರ್ನೌಮಿನಲ್ಲಿ ಯೇಸು ಮಾಡಿದ ಅದ್ಭುತ ಸಂಗತಿಗಳ ಬಗ್ಗೆ ಅರಿತ್ತಿದ್ದರಿಂದ ಆತನು ಇನ್ನೂ ಹೆಚ್ಚಿನ ಸಂಗತಿಗಳನ್ನು ಮಾಡಬೇಕೆಂಬ ಅಪೇಕ್ಷೆಯಲ್ಲಿದ್ದರು (ನೋಡಿ ಲೂಕ 4:23). ಫರಿಸಾಯರು ಆತನಿಂದ ಒಂದು ಸೂಚಕ ಕಾರ್ಯವನ್ನು ಬಯಸಿರು (ನೋಡಿ ಮತ್ತಾಯ 12:38-42). ''ಅದು ನಂಬಿಕೆಗೆ ಸೂಚನೆಯಾಗಿರದೆ, ಅಪನಂಬಿಕೆಯ ಗುರುತಾಗಿತ್ತು. ಕೆಲವು ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥ ಮಾಡದೆ ಹೊರತು ಬೇರೆ ಯಾವ ಮಹತ್ಕಾರ್ಯವನ್ನು ಮಾಡುವದಕ್ಕಾಗಲಿಲ್ಲ'' (ಮಾರ್ಕ 6:5)[32] (ನೋಡಿ ಮತ್ತಾಯ 13:58).

ಅವರು ಆತನ ಪ್ರಾಣವನ್ನು ತೆಗೆಯಬೇಕೆಂದಿರುವಾಗ, ಪ್ರವಾದಿಗೆ ಸ್ವದೇಶದಲ್ಲಿ ಮರ್ಯಾದಿಯಿಲ್ಲ ಅಂದಲ್ಲ (ಮತ್ತಾಯ 13:57; ಮಾರ್ಕ 6:4; ನೋಡಿ ಯೋಹಾನ 4:44). ಯೇಸು ಈ ಜನರನ್ನು ತಿಳಿದಿದ್ದನು. ಆತನು ಅವರೊಂದಿಗೆ ಬೆಳೆದಿದ್ದನ್ನು ವಾಸಿಸಿದ್ದನು, ಅವರೊಂದಿಗೆ ಕೆಲಸ ಮಾಡಿದ್ದನು, ಸಹಾಯ ಮಾಡಿದ್ದನು, ಹೀಗಿರುವಲ್ಲಿ ಅವರ ಅಪನಂಬಿಕೆಯು ಆತನ ಮನಸ್ಸನ್ನು ಮುರಿದಿತ್ತು. NASBಯಲ್ಲಿ ''ಅವರ ಅಪನಂಬಿಕೆಗೆ ಆಶ್ಚರ್ಯಪಟ್ಟನು'' ಎಂಬುದಾಗಿದೆ (ಮಾರ್ಕ 6:6). ''ಅವರ ಅಪನಂಬಿಕೆಯ ಪಾತ್ರವನ್ನು ಆತನು ಮೆಚ್ಚಲಿಲ್ಲ'' ಎಂದು ಇನ್ನೊಂದು ವ್ಯಾಖ್ಯಾನವಿದೆ.

## ಮುಕ್ತಾಯ

ಒಂದ ಕಥೆ, ಯಾಯಿರನ ನಂಬಿಕೆಯನ್ನೂ, ಬಲಹೀನವಾದ ಸ್ತ್ರೀಯ ನಂಬಿಕೆಯನ್ನೂ ಹಾಗೂ ಇಬ್ಬರು ಕುರುಡರ ನಂಬಿಕೆಯನ್ನೂ ನೋಡಿದ್ದೇವೆ. ಇನ್ನೊಂದು ಕಡೆ ಯಾಯೀರನ ಮನೆಯಲ್ಲಿ ಗೋಳಾಡುತ್ತಿದ್ದವರ ಅಪನಂಬಿಕೆಯನ್ನು, ಫರಿಸಾಯರ ಅಪನಂಬಿಕೆಯನ್ನು, ಹಾಗೆ ನಜರೇತಿನವರ ಅವನಂಬಿಕೆಯನ್ನು ನೋಡಿದ್ದೇವೆ. ಜೀವನದ ಒಂದು ಅತಿ ಪ್ರಮುಖವಾದ ಪ್ರಶ್ನೆ ಏನೆಂದರೆ: ನಾವು ಯೇಸುವನ್ನು ನಿಜವಾಗಿ ನಂಬುತ್ತಿದ್ದೇವೋ? ನಂಬಿಕೆಯ ಹೊರತು, ಆತನು ನಮ್ಮನ್ನು ಆಶೀರ್ವದಿಸುವದಿಲ್ಲ (ನೋಡಿ ಮಾರ್ಕ 6:5). ಕ್ರಿಸ್ತನ ಬಗ್ಗೆ

ನಾವುಗಳು ಧ್ಯಾನವನ್ನು ಮುಂದುವರೆಸುವಾಗ, ನಿಮ್ಮ ನಂಬಿಕೆಯು ಆತನಲ್ಲಿ ಅಭಿವೃದ್ಧಿ ಹೊಂದಲಿ ಎಂಬದು ನನ್ನ ಪ್ರಾರ್ಥನೆ (ಯೋಹಾನ 20:30, 31; ರೋಮಾಪುರ 10:17).

---

## ಮಾಹಿತಿ

ಪ್ರಸಂಗಕ್ಕೆ ಸಂಬಂಧಪಟ್ಟ ಅನೇಕ ಪ್ರಸ್ತಾಪಗಳನ್ನು ಸಹಜವಾಗಿ ಇಲ್ಲಿ ನೀಡಲಾಗಿದೆ. ಯಾಯೀರನ ಮಗಳ ಅದ್ಭುತ ಹಾಗೂ ರಕ್ತಕುಸುಮ ರೋಗಿಯ ವಿಚಾರದಲ್ಲಿ ನೀವು ಬಹು ಆಸಕ್ತಿ ವ್ಯಕ್ತಪಡಿಸಿರಬಹುದು. ನಾನು ಈ ಪ್ರಸಂಗವನ್ನು ಮಾಡುವದಾದರೆ, "ಇನ್ನೊಂದಿಗೂ ಭಯಪಡಬೇಡಿ" ಎಂಬ ಶಿರ್ಷಿಕೆಯನ್ನು ನೀಡುತ್ತಿದೆ. ಯಾಯೀರನು ತನ್ನ ಮಗಳಿಗೆ ಮಾಡಬೇಕಾದದ್ದನ್ನೆಲ್ಲಾ, ಮಾಡಿದ ನಂತರವೂ ಅವನು ಬಹಳ ಬೇಸರ ಪಟ್ಟಿರಬಹುದು, ಅದಾಗ್ಯೂ, ಅವಳು ಸತ್ತಳು ಎಂಬ ಸುದ್ದಿ ಅವನಿಗೆ ಮುಟ್ಟಿತು. ಅಂಥ ಸಮಯದಲ್ಲಿ ಯೇಸು, "ಭಯಪಡಬೇಡ, ನಂಬಿಕೆ ಮಾತ್ರ ಇರಲಿ" ಅಂದನು (ಮಾರ್ಕ 5:36; ಲೂಕ 8:50). ನಾವು ಮಾಡಬೇಕಾದದ್ದನ್ನು ಮಾಡಿ ಮುಗಿಸಿದ ನಂತರ, ಸಂಪನ್ಮೂಲಗಳ ಕೊರತೆ ಉಂಟಾಗುವಾಗ, ಪ್ರಾರ್ಥನೆಗೆ ಉತ್ತರ ದೊರಕದೆ ಇರುವಾಗ, "ಆತನನ್ನು ನಂಬಿರಿ," ನಿನ್ನನ್ನು ಪ್ರೀತಿಸುವ ದೇವರನ್ನು ನಂಬು; ಎಲ್ಲವನ್ನು ಸರಿಪಡಿಸುವ ದೇವರನ್ನು ಮಾತ್ರ ನಂಬು.

ಇಬ್ಬರು ಕುರುಡರ ಸ್ವಸ್ಥತೆಯು ಸಹ ಪ್ರಸಂಗಕ್ಕೆ ಯೋಗ್ಯವಾದ ಸಂಕ್ಷಿಪ್ತ ವಿಷಯವಾಗಿದೆ. ಅದರ ಬಗ್ಗೆ ಮುಂದೆ ಆಳವಾಗಿ ತಿಳಿಸಲಾಗುವದು: ಬಾರ್ತಿಮಾಯನ ಬಗ್ಗೆ ಚರ್ಚಿಸಲಾಗುವದು (ಮತ್ತಾಯ 20:29-34; ಮಾರ್ಕ 10:46-52; ಲೂಕ 18:35-43).

ಯೇಸುವಿನ ನಜರೇತಿನ ತಿರಸ್ಕಾರದ ಪಾಠ ಮುಂದುವರೆಯಲಿದೆ. ಜೋ ಬಾರ್ನೆಬರವರ "ಸಂದೇಶ" ನೋಮೇರ್ ಹೋ - ಹಮ್ ಸಂಡೇಸ್[33] ಎಂಬ ಪ್ರಸಂಗವು ಇದೆ.

---

ಟಿಪ್ಪಣೆಗಳು

[1]ಗ್ರೀಕ್ ಭಾಷೆಯ "ನಂಬಿಕೆ" "ವಿಶ್ವಾಸಿ" ಎಂದು ಭಾಷಾಂತರ ಮಾಡಲಾಗಿದೆ. [2]*ಕ್ರಿಸ್ತನ ಜೀವನ ಚರಿತ್ರೆ, 2ನೇ* "ಅವರು ಆಶ್ಚರ್ಯಪಟ್ಟು, ಮಹಿಮೆಪಡಿಸಿದರು" ಎಂಬ ಪಾಠ ನೋಡಿರಿ. [3]ಸಭಾಮಂದಿರದ ಅಧಿಕಾರಗಳು ಅಂದರೆ, ಮೇಲ್ವಿಚಾರಕರು. [4]ಹೊಸ ಒಡಂಬಡಿಕೆಯ "ಹಿರಿಯರು" ಎಂದರೆ "ಮೂಲಪಿತೃಗಳು" ಎಂಬ ಅರ್ಥ (ಮತ್ತಾಯ 15:2). ಅಂದು ಜೀವಿಸಿದ ಯೆಹೂದ್ಯ ನಾಯಕರು ಸದ್ದುಕಾಯರಿಗಿಂತ ಕೆಳಮಟ್ಟದವರು. ಧಾರ್ಮಿಕಾ ನಾಯಕರನ್ನು "ಹಿರಿಯರು" ಎನ್ನಲಾಗಿದೆ. "ಕ್ರಿಸ್ತನು ಹಿರಿಯರಿಂದಲೂ ಮಹಾಯಾಜಕರಿಂದಲೂ ತಿರಸ್ಕರಿಸಲ್ಪಟ್ಟನು (ಮತ್ತಾಯ 16:21; ನೋಡಿ 21:23). "ಹಿರಿಸಭೆ" (ಲೂಕ 22:66). [5]ಸಭಾಮಂದಿರದ ಕೆಳಹಂತದವರನ್ನು "ಸಭಾಮಂದಿರದ ಆಳು" ಎಂದಿದೆ (ಲೂಕ 4:20). [6]ಮತ್ತಾಯನ ಪ್ರಕಾರ, "ಯಾಯೀರನ ಮಗಳು ಸಾಯುತ್ತಾಳೆ" (ಮತ್ತಾಯ 9:18) ನಾನು ಇಲ್ಲಿಗೆ ಬರುವದಕ್ಕಿರುವಾಗ ಆಕೆ ಸತ್ತಳು ಎಂದಿರಬಹುದು. ಆದ್ದರಿಂದ ನಾವು ಶ್ರೇಷ್ಟವಾಗಿ ಹೋಗಬೇಕು. ವೈದ್ಯನಾದ ಲೂಕನ ಪ್ರಕಾರ, "ಆಕೆ ಸಾಯುತ್ತಿದ್ದಳು" (ಲೂಕ 8:42). [7]ಯೇಸು ಕಪೆರ್ನೌಮಿಗೆ ಹಿಂದಿರುಗಿರಬಹುದು. "ಈತನು ಯಾರು?" ಎಂಬುದನ್ನು ಚರ್ಚಿಸಿ. [8]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 352. [9]"ಅಶುದ್ಧನು" ಅಂದರೆ ತಿಂಗಳ ಅಶುದ್ಧತೆ, ಶುದ್ಧಾ ಅಶುದ್ಧಗಳ ಕುರಿತ ನಿಯಮಾವಳಿಗಳಿದ್ದವು. [10]"ದೈಹೀಕ ಶಾಸ್ತ್ರ" ಜೀವದ ಅಂಗಾಗಳ ಕ್ರಿಯೆ.

[11]ನಿಯಮದ ನೆನಪು (ಧರ್ಮೋಪದೇಶಕಾಂಡ 22:12) ಯಲ್ಲಿ, "ಉಡುಪಿನ ಗೋಡೆ" ಎಂದಿದೆ. ಗುರಿ ಸಾಧಿಸಿದ ವಿವರಣೆ. [12]ಪ್ರಾರ್ಥನೆಯ ವಿವರಣೆ. [13]ಯೋಹಾನ 6:5, 6 ಮತ್ತೊಂದು ಉದಾಹರಣೆ. [14]ಇತರರನ್ನು ಮುಟ್ಟುವದು ಅವರನ್ನು "ಅಶುದ್ಧಮಾಡುತ್ತದೆ" ಎಂಬ ವಿಚಾರದಿಂದ ಆಕೆ ಭಯಗೊಂಡಿರಬಹುದು (ಯಾಜಕಕಾಂಡ 15:19). ರಬ್ಬಿಗಳು ಆಕೆಯನ್ನು ತಿರಸ್ಕರಿಸಬಹುದಾದರೆ, ಯೇಸು ಆ ರೀತಿ ಮಾಡಲಿಲ್ಲ. [15]ಹುಡುಗಿ ಜೀವದಿಂದದ್ದರೆ, "ಗುಣಹೊಂದು" ಎಂಬ ಮಾತು

ಸಮಂಜಸವಾಗುತ್ತಿತ್ತು. ಇದು ಸಹ ಸ್ವಸ್ಥತೆಯ ಸಾಲಿಗೆ ಸೇರಿದ ಸಂಗತಿ ಎಂದು ನಾನು ಒತ್ತಿ ಹೇಳುತ್ತೇನೆ. ಗುಣಪಡಿಸುತ್ತೇನೆ ಎಂದು ಹೇಳುವವರು ಸತ್ತವರನ್ನು ಸಹ ಎಬ್ಬಿಸಬೇಕು. [16]ಬಡವರು ಸಹ ಗೋಳಾಡುವವದರಾಗಿ "ಒಬ್ಬ ಹೆಂಗಸನ್ನು" ನೇಮಿಸಬೇಕಿತ್ತು. [17]"ಮರಣ" ಹಾಗೂ "ನಿದ್ರೆ" ಸಮಾನ ಪದಗಳು (ನೋಡಿ ಯೋಹಾನ 11:11-14). "ಸಮಾಧಿ" ಎಂದರೆ "ಮಲಗುವ ಸ್ಥಳ." [18]"ನಗು" ತಿರಸ್ಕಾರದ ಮನೋಭಾವನೆ. ಅಳುವವರು ಸಂಬಳ ಪಡೆಯಲಾರರು ಎಂಬ ಭೀತಿ. [19]ರೂಪಾಂತರ ಹಾಗೂ ಗೆತ್ಸೆಮನೆ ತೋಟದ ಮತ್ತೆರಡು ಚಿತ್ರಣಗಳು (ಮತ್ತಾಯ 17:1; ಮಾರ್ಕ 14:33). ಏಕೆ ಈ ಮೂವರು ಪ್ರಮುಖರಾಗಿದ್ದರು, ನಾವು ಅದನ್ನು ಅರಿಯವು. ಅವರ ಭವಿಷ್ಯತ್ತಿನ ಪಾತ್ರವಿರಬಹುದು. ಪೇತ್ರನು ಆದಿಸಭೆಯ ನಾಯಕನಾದನು. ಯಾಕೋಬನು ಪ್ರಥಮ ರಕ್ತಸಾಕ್ಷಿ, ಯೋಹಾನನು ಅಪೋಸ್ತಲ ವೃತ್ತಿಯನ್ನು ಮುಂದುವರೆಸಿದವನು. [20]ಈ ವಾಕ್ಯವು McGarvey ಮತ್ತು Pendleton, 356 ರಿಂದ ಆಯ್ದುಕೊಳ್ಳಲಾಗಿದೆ.

[21]ಮರಣದಿಂದ ಎಬ್ಬಿಸಿದ ಎರಡನೆಯ ದಾಖಲೆ, ವಿಧವೆಯ ಮಗನನ್ನು ಎಬ್ಬಿಸಿದ್ದು ಪ್ರಥಮವಾದದ್ದು (ಲೂಕ 7), ಲಾಜರನನ್ನು ಎಬ್ಬಿಸಿದ್ದು ಮೂರನೆಯದು (ಯೋಹಾನ 11:1). [22]ಚಿಕ್ಕ ಹೆಣ್ಣುಮಕ್ಕಳನ್ನು ಅರಿಯುವದು. [23]ಅನಾರೋಗ್ಯದ ನಿಮಿತ್ತ ಹಸಿವಾಗಿರಲಾರದು. ಅನೇಕ ದಿವಸಗಳಿಂದ ಆಹಾರ ಸೇವಿಸಿರದೆ ಇರಬಹುದು. ನಾವು ನಮಗೆ ಸಹಾಯ ಮಾಡಿಕೊಳ್ಳದೆ ಇದ್ದರೆ, ದೇವರೂ ಸಹ ಸಹಾಯಿಸಲಾರನು. [24]"ದಾವೀದ ಕುಮಾರನೇ" ಎಂಬುದು ಯೆಹೂದ್ಯರು "ಮೆಸ್ಸೀಯನ" ಕುರಿತು ಹೇಳಿದ ವ್ಯಾಖ್ಯಾನ. [25]ಕೆಲವರು ಸ್ವಸ್ಥವಾದರೆ, ಇನ್ನು ಕೆಲವರು ಆಗಲಿಲ್ಲ. ಶಕ್ತಿಯು ಕ್ರಮದಲ್ಲಿರದೆ, ವ್ಯಕ್ತಿಯಲ್ಲಿತ್ತು. [26]ದೆವ್ವದ ಬಾಧೆಯ ಸಂಗಡ ಆ ಮನುಷ್ಯನು ಧೈಹೀಕ ನ್ಯೂನತೆಗಳನ್ನು ಹೊಂದಿರಬಹುದು (ಮೂಕ, ಮೂಗ). ದೆವ್ವದ ಬಾಧೆ ನಿಮಿತ್ತ ಮೂಗನಾಗಿರಬಹುದು (ಮಾರ್ಕ 9:17ನ್ನು ನೋಡಿ). [27]ಈ ದೋಷಾರೋಪಣಕ್ಕೆ ಯೇಸುವಿನ ಉತ್ತರಕ್ಕಾಗಿ "(ಕೆಲಸದ) ಒತ್ತಡದ ದಿನ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕವನ್ನು ನೋಡಿ. [28]ಮೂರನೆ ಪ್ರಯಾಣದ ಕುರಿತು ಮುಂದಿನ ಪಾಠದಲ್ಲಿ ನೋಡೋಣ. [29]ಯೇಸುವಿನ ಕರುಣೆಯನ್ನು, ಆತನ ನಜರೇತಿನ ಮೂರನೆಯ ಬೇಟಿಯಲ್ಲಿ ಕಾಣುತ್ತೇವೆ. [30]ಸಭಾಮಂದಿರದ ಚಟುವಟಿಕೆಯ ಬಗ್ಗೆ ಲೂಕನು ಪೂರ್ಣ ಮಾಹಿತಿ ನೀಡಿರುವನು. ಪ್ರೇರಿತ ವಲ್ಲದ ಬರವಣಿಗೆಗಳಲ್ಲೂ ನೋಡುತ್ತೇವೆ.

[31]*The Answer* (Dallas: Word Bibles, 1993), 980. [32]ಯೇಸು "ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥ ಮಾಡಿದ್ದೇ ಹೊರತು ಬೇರೆ ಯಾವ ಮಹತ್ಕಾರ್ಯವನ್ನೂ *ಮಾಡುವದಕ್ಕಾಗಲಿಲ್ಲ*" (ಮಾರ್ಕ 6:5; ಒತ್ತಿ ಹೇಳಿದ್ದು ನನ್ನದು) ಎಂದು ಮಾರ್ಕನ ಸುವಾರ್ತೆಯು ದಾಖಲಿಸಿದೆ. ಎಂದಾದರು ದೇವರು (ಅಥವಾ ಯೇಸು) ಏನ್ನಾದರೂ ಮಾಡುವದಕ್ಕಾಗಲಿಲ್ಲವೆಂದು ಬೈಬಲ್ ಹೇಳಿಕೊಂಡರೆ "ಆತನ ಉದ್ದೇಶ ಮತ್ತು ಚಿತ್ತಕ್ಕೆ ಅದು *ಅನುಗುಣವಾಗಿಲ್ಲವೆಂದು*" ಅರ್ಥಮಾಡಿಕೊಳ್ಳಬೇಕು. [33]Joe Barnett, *Live! With Peace, Power, and Purpose,* 20th Century Sermons Series, vol. 11 (Abilene, Tex.: Biblical Research Press, 1978), 118-25.